# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–3221/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 20/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಗಣೇಶ್, ಕಪ್ಪೆಟ್ಟು, ಕಿದಿಯೂರು ಗ್ರಾಮ, ಅಂಬಲಪಾಡಿ ಅಂಚೆ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ಗಣೇಶ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಕಿದಿಯೂರು ಗ್ರಾಮದ ಕಪ್ಪೆಟ್ಟುವಿನಲ್ಲಿ ಶ್ರೀ ಮಾಧವ ಪೂಜಾರಿ ಎಂಬುವವರು ಅಕ್ಕಿರೊಟ್ಟಿ ತಯಾರಿಸುವ ಉದ್ದಿಮೆ/ಕಾರ್ಖಾನೆಯನ್ನು ನಡೆಸುತ್ತಿದ್ದು, ಸದರಿ ಸ್ಥಳವು ವಾಣಿಜ್ಯ ಉದ್ದಿಮೆಗೆ ಸಂಬಂಧಿಸಿದಂತೆ ಭೂ ಪರಿವರ್ತನೆಗೊಂಡಿರುವುದಿಲ್ಲ ಮತ್ತು ಪಂಚಾಯತಿ ವತಿಯಿಂದ ಪರವಾನಗೆಯನ್ನು ಸಹ ಪಡೆದಿರುವುದಿಲ್ಲ. ಹೀಗಿದ್ದರೂ ಸಹ 2ನೇ ಎದುರುದಾರರಾದ ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ ಸಂಸ್ಥೆ ಇವರು ವಿದ್ಯುತ್ ಸಂಪರ್ಕವನ್ನು ಸದರಿ ಉದ್ದಿಮೆಗೆ ನೀಡಿರುತ್ತಾರೆ. ಸದರಿ ಕಾರ್ಖಾನೆಗೆ ಇಂಧನವಾಗಿ ಗೇರುಬೀಜದ ಸಿಪ್ಪೆಯನ್ನು ಉಪಯೋಗಿಸುತ್ತಿದ್ದು, ಇದರಿಂದ ಪರಿಸರದಲ್ಲಿ ವಾಯುಮಾಲಿನ್ಯಗೊಂಡಿರುತ್ತದೆ. ಇದಲ್ಲದೇ, ಸದರಿ ಉದ್ದಿಮೆಯ ತ್ಯಾಜ್ಯವನ್ನು ಸಾರ್ವಜನಿಕ ಸ್ಥಳದಲ್ಲಿ ಬಿಡುಗಡೆಗೊಳಿಸುತ್ತಿರುವುದರಿಂದ ಕಾರ್ಖಾನೆಯ ಸುತ್ತಮುತ್ತಲಿನ ಪರಿಸರವು ಮಲಿನಗೊಂಡಿರುತ್ತದೆ. ಈ ಬಗ್ಗೆ ಪರಿಸರ ಮಾಲಿನ್ಯ ನಿಯಂತ್ರಣ ಪ್ರಾಧಿಕಾರಕ್ಕೆ ಕ್ರಮ ಕೈಗೊಳ್ಳುವಂತೆ ಕೋರಿ ಪತ್ರ ಬರೆದಿದ್ದರೂ ಸಹ 1ನೇ ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. 2ನೇ ಎದುರುದಾರರು ಸಲ್ಲಿಸಿರುವ ವರದಿಯಲ್ಲಿ ಪರಿಸರ ಮಾಲಿನ್ಯಗೊಳ್ಳುವ ಸಂಭವ ಇರುವುದಿಲ್ಲವೆಂದು ಹಾಗೂ ಸ್ಥಳ ಪರಿಶೀಲನಾ ಕಾಲದಲ್ಲಿ ಅಕ್ಕಿರೊಟ್ಟಿ ಕಾರ್ಖಾನೆಯು ಕಾರ್ಯನಿರತವಾಗಿರಲಿಲ್ಲವೆಂದು ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ. ಇದಲ್ಲದೇ, ಕಾರ್ಖಾನೆಯ ತ್ಯಾಜ್ಯ ನೀರನ್ನು ಕಾರ್ಖಾನೆಯವರು ತಮ್ಮ ಸ್ವಂತ ಜಾಗದಲ್ಲಿ ಗುಂಡಿಯನ್ನು ನಿರ್ಮಿಸಿ ತ್ಯಾಜ್ಯವನ್ನು ಸಂಗ್ರಹಿಸುತ್ತಿರುತ್ತಾರೆಂದು ನಂತರ ಆ ನೀರನ್ನು

ತೋಟಕ್ಕೆ ಉಪಯೋಗಿಸಿಕೊಳ್ಳುತ್ತಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ. ಆದರೆ, 2ನೇ ಎದುರುದಾರರು ನೀಡಿರುವ ವರದಿಯು ಸತ್ಯಕ್ಕೆ ದೂರವಾಗಿರುತ್ತದೆ. ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರುಗಳ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರುಗಳು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಅಕ್ಕಿರೊಟ್ಟಿ ಘಟಕದ ಪರವಾನಗಿಗೆ ಸಂಬಂಧಿಸಿದಂತೆ ಮತ್ತು ಅದರಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ದೂರನ್ನು ಮಾನ್ಯ ಜಿಲ್ಲಾಧಿಕಾರಿಗಳವರಿಗೆ ನೀಡಿದ್ದು, ಜಿಲ್ಲಾಧಿಕಾರಿಯವರು ದೂರನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆ ಇವರಿಗೆ ರವಾನಿಸಿದ್ದು, ನಂತರ ಅವರಿಂದ ತಮಗೆ ಸೂಕ್ತ ಕ್ರಮ ಜರುಗಿಸಲು ದೂರು ವರ್ಗಾವಣೆಯಾಗಿರುತ್ತದೆ ಎಂದು ಸದರಿ ದೂರಿಗೆ ಸಂಬಂಧಿಸಿದಂತೆ ತಮ್ಮ ಕಛೇರಿಯ ಸಹಾಯಕ ಪರಿಸರ ಅಧಿಕಾರಿಯವರು ದಿ:05/05/2015 ರಂದು ಸ್ಥಳ ಪರಿವೀಕ್ಷಣೆ ನಡೆಸಿ ವರದಿ ಸಲ್ಲಿಸಿರುತ್ತಾರೆಂದು, ಸದರಿ ವರದಿಯಲ್ಲಿ ಪರಿವೀಕ್ಷಣಾ ಕಾಲದಲ್ಲಿ ಅಕ್ಕಿರೊಟ್ಟಿ ಘಟಕವು ತಾತ್ಕಾಲಿಕವಾಗಿ ಕಾರ್ಯಾಚರಣೆ ಮಾಡುತ್ತಿರಲಿಲ್ಲವೆಂದು, ಸದರಿ ಘಟಕವು ಸಣ್ಣ ತವೆಯಲ್ಲಿ (ಕಾವಲಿ) ಅಕ್ಕಿಹಿಟ್ಟನ್ನು ಬೇಯಿಸಿ ರೊಟ್ಟಿ ಮಾಡುವ ಗೃಹ ಚಟುವಟಿಕೆಯಾಗಿರುತ್ತದೆ. ಇದು ಮಂಡಳಿಯಿಂದ ಪರವಾನಗೆ ಪಡೆಯಬೇಕಾದ ಉದ್ಯಮಗಳ ವರ್ಗೀಕರಣ ಪಟ್ಟಿಯಲ್ಲಿ ಸೇರಿರುವುದಿಲ್ಲ. ಘಟಕದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಗ್ರಹಿಸಲು ಪ್ರತ್ಯೇಕ ಸೀಮೆಂಟ್ ಗುಂಡಿಯನ್ನು ನಿರ್ಮಿಸಿರುತ್ತಾರೆ. ಘಟಕದ ಪಕ್ಕದ ತೋಡಿನಲ್ಲಿ ಸಮೀಪದ ಮನೆಯವರು ಹಲವಾರು ರೀತಿಯ ಘನ ತ್ಯಾಜ್ಯಗಳನ್ನು ಹಾಕಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಛಾಯಾಚಿತ್ರವನ್ನು ತೆಗೆಯಲಾಗಿರುತ್ತದೆ. ದೂರಿನಲ್ಲಿ ಪ್ರಸ್ತಾಪಿಸಿದ ಅಕ್ಕಿರೊಟ್ಟಿ ತಯಾರಿಕಾ ಘಟಕವು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರ ವ್ಯಾಪ್ತಿಗೆ ಒಳಪಡುವ ಘಟಕವಾಗಿರುವುದಿಲ್ಲ. ಪ್ರಸ್ತಾಪಿತ ಗೃಹಚಟುವಟಿಕ ಘಟಕಕ್ಕೆ ಅನುಮತಿ ನೀಡುವುದು ಆಯಾ ಗ್ರಾಮ ಪಂಚಾಯತಿಗೆ ಒಳಪಡುತ್ತದೆ. ಮಳೆ ನೀರಿನ ತೋಡಿನಲ್ಲಿ ಸಮೀಪದ ಮನೆಯವರು ಘನ ತ್ಯಾಜ್ಯ ಹಾಕಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕಿದಿಯೂರು ಗ್ರಾಮ ಪಂಚಾಯತಿಯವರಿಗೆ ತಮ್ಮ ಕಛೇರಿಯಿಂದ ಪತ್ರ ಬರೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಅಕ್ಕಿರೊಟ್ಟಿ ತಯಾರಿಕೆ ಉದ್ದಿಮೆಗೆ ಸ್ಥಾವರ ಸಂಖ್ಯೆ:ಯುಡಿಪಿ13775ರ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಸದರಿ ಸ್ಥಾವರದ ದಾಖಲೆಗಳ

ಪ್ರಕಾರ ಅಕ್ಕಿರೊಟ್ಟಿ ಉದ್ದಿಮೆಗೆ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿದಾರರು ದಿ:19/03/1993 ರಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಯೊಂದಿಗೆ ಪಂಚಾಯತಿ ವತಿಯಿಂದ ನೀಡಲ್ಪಟ್ಟ ಪರವಾನಗೆಯ ಪ್ರತಿಯನ್ನು ಸಲ್ಲಿಸಿರುತ್ತಾರೆ. ದಿ:04/05/1993 ರಲ್ಲಿ ವಿದ್ಯುತ್ ಮಂಜೂರಾತಿ ನೀಡಲಾಗಿರುತ್ತದೆ. ಕಂಪನಿಯ ನಿಯಮಾವಳಿ ಪೂರೈಸಿದ ತರುವಾಯ ದಿ:18/08/1993 ರಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ತದನಂತರ, ಸದರಿ ಉದ್ದಿಮೆಗೆ ಹೆಚ್ಚುವರಿ ಹೊರೆ ಮಂಜೂರಾತಿಗಾಗಿ ದಿ:13/01/2005 ರಲ್ಲಿ ಬಳಕೆದಾರರು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯೊಡನೆ ಚಾಲ್ತಿಯಲ್ಲಿದ್ದ ಲೈಸೆನ್ಸ್ ಅನ್ನು ಸಹ ಸಲ್ಲಿಸಿರುತ್ತಾರೆ. ಕೋರಿದ ಹೆಚ್ಚುವರಿ ಹೊರೆಯನ್ನು ದಿ:09/02/2005 ರಲ್ಲಿ ಮಂಜೂರು ಮಾಡಲಾಗಿರುತ್ತದೆ. ಬಳಕೆದಾರರು ಕಂಪನಿಯ ನಿಯಮಾವಳಿ ಪೂರೈಸಿದ ನಂತರ ದಿ:05/03/2005 ರಂದು ಹೆಚ್ಚುವರಿ ಹೊರೆ ಸಂಪರ್ಕ ನೀಡಲಾಗಿರುತ್ತದೆ. ಈ ಎಲ್ಲ ಪ್ರಕ್ರಿಯೆಗಳು ನಿಯಮಾನುಸಾರವಾಗಿರುತ್ತದೆ. ಆದ್ದರಿಂದ, ತಮ್ಮ ಮೇಲಿನ ಪ್ರಕರಣವನ್ನು ಕೈಬಿಟ್ಟು ಮುಕ್ತಗೊಳಿಸಬೇಕಾಗಿ ಕೋರಿರುತ್ತಾರೆ.

5. ಎದುರುದಾರರುಗಳ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಪರಿಸರ ಅಧಿಕಾರಿಯವರು ಸ್ಥಳ ಪರಿವೀಕ್ಷಣಾ ಕಾಲದಲ್ಲಿ ತನಗೆ ಸ್ಥಳದಲ್ಲಿ ಹಾಜರಿರಲು ನೋಟೀಸ್ ನೀಡಿರಲಿಲ್ಲವೆಂದು ಆದರೆ, ಸದರಿ 1ನೇ ಎದುರುದಾರರು ನೀಡಿರುವ ವರದಿ ಸುಳ್ಳಿನಿಂದ ಕೂಡಿರುತ್ತದೆ ಎಂದು ರೊಟ್ಟಿ ಉದ್ದಿಮೆ/ಕಾರ್ಖಾನೆ ಈಗಲೂ ಸಹ ಕಾರ್ಯನಿರ್ವಹಿಸುತ್ತಿದೆ ಎಂದು ಸದರಿ ಉದ್ದಿಮೆಗೆ ಗೋಡಂಬಿಯ ಸಿಪ್ಪೆಗಳನ್ನು ಉರವಲಾಗಿ ಉಪಯೋಗಿಸಲಾಗುತ್ತಿದೆ ಎಂದು ಇದರಿಂದ ಪರಿಸರ ಮಾಲಿನ್ಯವಾಗುತ್ತಿದೆ ಎಂದು ಕಾರಣ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

6. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ಉಡುಪಿಯ ಆರಕ್ಷಕ ನಿರೀಕ್ಷಕರಿಗೆ ವಹಿಸಲಾಗಿದ್ದು, ಸದರಿಯವರು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯಲ್ಲಿ ತಾವು ದೂರಿಗೆ ಸಂಬಂಧಿಸಿದಂತೆ ತನಿಖೆಯನ್ನು ಕೈಗೊಂಡು ಕಿದಿಯೂರು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ದಿ ಅಧಿಕಾರಿಯವರಿಗೆ ದಾಖಲೆಗಳನ್ನು ಮತ್ತು ಮಾಹಿತಿಯನ್ನು ನೀಡುವಂತೆ ಕೋರಿ ಪತ್ರ ಬರೆದು, ಅದರಂತೆ, ದಾಖಲೆಗಳನ್ನು ಹಾಗೂ ಮಾಹಿತಿಯನ್ನು ಒದಿಗಿಸಿರುತ್ತಾರೆ. ಪಂಚಾಯತಿ ಕಾರ್ಯದರ್ಶಿ, ಅಂಬಲಪಾಡಿ ಗ್ರಾಮ ಪಂಚಾಯತ್, ಕಿದಿಯೂರು, ಉಡುಪಿ ತಾಲ್ಲೂಕು ಇವರು ದಿ:24/10/2016 ರಂದು ವರದಿಯನ್ನು ನೀಡಿದ್ದು, ಅದರಲ್ಲಿ ಕಿದಿಯೂರು ಗ್ರಾಮದ ಕಪ್ಪೆಟ್ಟು ಎಂಬಲ್ಲಿ ಶ್ರೀ ಮಾಧವ ಪೂಜಾರಿ ಇವರು ಅಕ್ಕಿರೊಟ್ಟಿ ಉದ್ದಿಮೆಗೆ ಪಂಚಾಯತಿ ವತಿಯಿಂದ 2011–12ನೇ ಸಾಲಿನಲ್ಲಿ ಪರವಾನಗೆಯನ್ನು ಪಡೆದಿರುತ್ತಾರೆ. ಸದರಿ ಉದ್ದಿಮೆಗೆ ಸಂಬಂಧಿಸಿದಂತೆ ಆಕ್ಷೇಪ ಬಂದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ ಪರವಾನಗೆಯನ್ನು ನವೀಕರಿಸಿರುವುದಿಲ್ಲ. ಶ್ರೀ ಮಾಧವ ಪೂಜಾರಿ ರವರು ನಡೆಸುತ್ತಿರುವ ಅಕ್ಕಿರೊಟ್ಟಿ ಉದ್ದಿಮೆ ಗೃಹ ಆಹಾರ ಉತ್ಪನ್ನ ಕೈಗಾರಿಕಾ ಚಟುವಟಿಕೆ ಆಗಿದ್ದು,

ಸದರಿ ಉದ್ದಿಮೆ ನಡೆಸುವ ಸ್ಥಳ ಅಂಬಲಪಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುತ್ತಿದ್ದು, ಅಕ್ಕಿರೊಟ್ಟಿ ಉದ್ದಿಮೆಯಲ್ಲಿ ಗೇರು ಬೀಜದ ಸಿಪ್ಪೆಯನ್ನು ಉಪಯೋಗಿಸುತ್ತಿದ್ದರಿಂದ, ಪರಿಸರ ಮಾಲಿನ್ಯ ಉಂಟಾಗುತ್ತಿದ್ದು, ಈ ಬಗ್ಗೆ ಸಾರ್ವಜನಿಕರಿಂದ ದೂರು ನೀಡಿದ ಬಗ್ಗೆ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ನಿರ್ಣಯದಂತೆ ಉಪನಿರ್ದೇಶಕರು ಗ್ರಾಮಾಂತರ ಕೈಗಾರಿಕೆ, ಮಣಿಪಾಲ್ ಇವರಿಗೆ ವರದಿ ಮಾಡಲಾಗಿರುತ್ತದೆ ಹಾಗೂ ಅಕ್ಕಿರೊಟ್ಟಿ ಉದ್ದಿಮೆ ನಡೆಸುತ್ತಿರುವ ಸ್ಥಳದ ಜಮೀನಿನ ಭೂ ಪರಿವರ್ತನೆ ಮಾಹಿತಿ ಲಭ್ಯವಿಲ್ಲವೆಂದು ತಿಳಿಸಿರುತ್ತಾರೆ. ದೂರಿಗೆ ಸಂಬಂಧಿಸಿದಂತೆ ಅಕ್ಕಿರೊಟ್ಟಿ ಉದ್ದಿಮೆಗೆ ವಿದ್ಯುತ್ ಸಂಪರ್ಕ ನೀಡಿದ ಬಗ್ಗೆ ಕಾರ್ಯನಿರ್ವಾಹಕ ಅಭಿಯಂತರರು, ಮೆಸ್ಕಾಂ, ಉಡುಪಿ ಇವರಿಗೆ ಮಾಹಿತಿ ನೀಡುವಂತೆ ಕೋರಿಕೊಂಡ ಮೇರೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ನಿರ್ವಹಣೆ ಮತ್ತು ಪಾಲನೆ, ಉಡುಪಿ ಉಪವಿಭಾಗ, ಮೆಸ್ಕಾಂ ರವರು ವರದಿ ನೀಡಿದ್ದು, ಸದರಿ ದಿ:27/10/2016ರ ವರದಿಯನ್ನು ಪರಿಶೀಲಿಸಲಾಗಿ, ಅಕ್ಕಿರೊಟ್ಟಿ ಉದ್ದಿಮೆಗೆ ಸ್ಥಾವರ ಸಂಖ್ಯೆ:ಯುಡಿಪಿ13775ರ ಮೂಲಕ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. ಸದರಿ ಸ್ಥಾವರದ ದಾಖಲೆ ಪ್ರಕಾರ ಸದರಿ ಉದ್ದಿಮೆಗೆ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿದಾರರು ದಿ:19/03/1993ರಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಯೊಂದಿಗೆ ಪಂಚಾಯತ್ ವತಿಯಿಂದ ನೀಡಿದ ಪರವಾನಗೆಯನ್ನು ಸಲ್ಲಿಸಿರುತ್ತಾರೆ. ಅದರಂತೆ, ವಿದ್ಯುತ್ ಮಂಜೂರಾತಿ ನೀಡಲಾಗಿದ್ದು, ಬಳಕೆದಾರರು ನಿಯಮಾವಳಿಗಳನ್ನು ಪೂರೈಸಿದ ನಂತರ ದಿ:18/08/1993 ರಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ ಎಂದು ಅದಾದ ನಂತರ ಹೆಚ್ಚುವರಿ ವಿದ್ಯುತ್ ಹೊರೆ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಬಳಕೆದಾರರು ಸಲ್ಲಿಸಿದ ಅರ್ಜಿಯ ಮೇರೆಗೆ ದಿ:05/03/2005 ರಂದು ಹೆಚ್ಚುವರಿ ಹೊರೆ ಸಂಪರ್ಕವನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

7. ಮುಂದುವರೆದು, ಶ್ರೀ ಮಾಧವ ಕೆ. ಇವರು ನಡೆಸುತ್ತಿರುವ ಅಕ್ಕಿರೊಟ್ಟಿ ಉದ್ದಿಮೆಯ ಸ್ಥಳವು ಸರ್ವೆ ನಂ.73/8ರಲ್ಲಿ ಒಟ್ಟು 0.20 ವಿಸ್ತೀರ್ಣದ ಜಾಗದಲ್ಲಿ ಇರುತ್ತದೆ. ಸದರಿ ಜಾಗವು ಭೂ ಪರಿವರ್ತನೆಗೊಂಡಿರುವ ಜಾಗವೇ ಎಂಬ ಬಗ್ಗೆ ಮಾಹಿತಿ ನೀಡುವ ಬಗ್ಗೆ ತಹಶೀಲ್ದಾರ್, ಉಡುಪಿ ಇವರಿಗೆ ಪತ್ರ ಬರೆದು ಮಾಹಿತಿಯನ್ನು ಕೋರಲಾಗಿದ್ದು, ಅದರಂತೆ, ತಹಶೀಲ್ದಾರ್ ರವರು ವರದಿಯನ್ನು ನೀಡಿರುತ್ತಾರೆ. ಅದರಲ್ಲಿ ಕಿದಿಯೂರು ಗ್ರಾಮದ ಸರ್ವೆ ನಂ.73/8 ರಲ್ಲಿ 0.20 ವಿಸ್ತೀರ್ಣ ಜಮೀನು ವಸಂತ ಬಿನ್ ದಿವಂಗತ ಬೊಪ್ಪ ಪೂಜಾರಿ ಮತ್ತು ಇತರರ ಹೆಸರಿನಲ್ಲಿರುತ್ತದೆ. ಸದರಿ ಜಮೀನು ಭೂಪರಿವರ್ತನೆಯಾಗಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ದೂರುದಾರರಿಗೆ ನೋಟೀಸ್ ನೀಡಿ ದಾಖಲಾತಿಗಳು ಇದ್ದಲ್ಲಿ ಹಾಜರುಪಡಿಸಲು ಸೂಚಿಸಿದ್ದು, ಸದರಿಯವರು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಸ್ಥಳ

ಪರಿಶೀಲನಾ ಕಾಲದಲ್ಲಿ ಅಕ್ಕಿರೊಟ್ಟಿ ಉದ್ದಿಮೆ ಇರುವ ಕಟ್ಟಡ ಸಂ:4-48ಎ ಎಂದು ಇರುತ್ತದೆ ಎಂದು ಸದರಿ ಕಟ್ಟಡದಲ್ಲಿ ಅಕ್ಕಿರೊಟ್ಟಿ ತಯಾರಿಕೆಗೆ ಗ್ರೈಂಡರ್ ಇರುತ್ತದೆ ಎಂದು ಹಾಗೂ ಅಕ್ಕಿರೊಟ್ಟಿ ತಯಾರಿಸಲು ಬಳಸುವ ಕಾವಲಿ ಸಹ ಇದ್ದು, ಕಾವಲಿಯ ಒಲೆಯನ್ನು ಮಾಡಿಕೊಂಡು ಅಕ್ಕಿರೊಟ್ಟಿ ತಯಾರಿಸುತ್ತಿರುವುದು ಕಂಡು ಬರುತ್ತದೆ. ಸದರಿ ಉದ್ದಿಮೆಯಲ್ಲಿ 3 ರಿಂದ 4 ಜನ ಕೆಲಸಗಾರರು ಅಕ್ಕಿರೊಟ್ಟಿ ತಯಾರಿ ಕೆಲಸವನ್ನು ಮಾಡಿಕೊಂಡಿರುವುದು ಕಂಡುಬಂದಿರುತ್ತದೆ. ಉದ್ದಿಮೆಯ ಕಟ್ಟಡದ ಪಶ್ಚಿಮದಲ್ಲಿ ಸುಮಾರು 50 ಅಡಿ ದೂರದಲ್ಲಿ ಡ್ರೈನೇಜ್ ಇದ್ದು, ಅದರ ಪಕ್ಕದಲ್ಲಿ ಮಣ್ಣು ರಸ್ತೆ ಹಾದು ಹೋಗಿರುತ್ತದೆ. ಸದರಿ ಉದ್ದಿಮೆಯ ಪೂರ್ವದಲ್ಲಿ ಸುಮಾರು 50 ಅಡಿ ದೂರದಲ್ಲಿ ನೀರು ಹರಿಯುವ ತೋಡು ಇರುತ್ತದೆ. ಸದರಿ ಉದ್ದಿಮೆಗೆ ಉರವಲಾಗಿ ಗೇರು ಬೀಜದ ಸಿಪ್ಪೆಯನ್ನು ಹಾಗೂ ತೆಂಗಿನ ಗರಟಿ ಮತ್ತಿತರೆ ಪರಿಕರಗಳನ್ನು ಬಳಕೆ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಅಕ್ಕಿ ತೊಳೆದ ನೀರು ಮತ್ತು ಇತರೆ ತ್ಯಾಜ್ಯಗಳನ್ನು ಶೇಖರಿಸಲು ಶೇಖರಣಾ ಗುಂಡಿಯನ್ನು ನಿರ್ಮಿಸಿಕೊಂಡಿದ್ದು, ಸದರಿ ಶೇಖರಣಾ ಗುಂಡಿಯಿಂದ ಪೈಪ್ ಮೂಲಕ ಶೇಖರಣೆಯಾದ ನೀರನ್ನು ಹತ್ತಿರದ ತೋಡಿಗೆ ಬಿಡುವ ವ್ಯವಸ್ಥೆ ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ.

8. ಸದರಿ ಉದ್ದಿಮೆಯ ನೆರೆಕೆರೆಯ ನಿವಾಸಿಗಳಾದ ಶ್ರೀಮತಿ ನೇತ್ರಾವತಿ ಪೂಜಾರ್ತಿ ಮತ್ತು ಶ್ರೀಮತಿ ಶಾರದ ಶೆಡ್ತಿ ರವರನ್ನು ವಿಚಾರಿಸಲಾಗಿ ಶ್ರೀ ಮಾಧವ ಕೆ ರವರು ನಡೆಸುತ್ತಿರುವ ಅಕ್ಕಿ ರೊಟ್ಟಿ ಉದ್ದಿಮೆಗೆ ಉರವಲಾಗಿ ಗೇರು ಬೀಜದ ಸಿಪ್ಪೆಯನ್ನು ಉಪಯೋಗಿಸುತ್ತಿರುವುದರಿಂದ ಅದರ ಹೊಗೆಯಿಂದ ತಮಗೆ ತೊಂದರೆಯಾಗುತ್ತಿರುವುದಾಗಿಯೂ ಅಲ್ಲದೇ ಸದರಿ ಉದ್ದಿಮೆಯಲ್ಲಿ ಅಕ್ಕಿತೊಳೆಯಲು ಬಳಸಿದ ನೀರನ್ನು ಶೇಖರಣಾ ಗುಂಡಿಯಿಂದ ನೀರು ಹರಿಯುವ ತೋಡಿಗೆ ಬಿಡುತ್ತಿರುವುದರಿಂದ ತೋಡಿನಲ್ಲಿ ಪಾಚಿಕಟ್ಟಿ, ತೋಡಿನ ನೀರು ಹಾಗೂ ಶೇಖರಣಾ ಗುಂಡಿಯಲ್ಲಿನ ತ್ಯಾಜ್ಯ ನೀರು ಶೇಖರಣೆಯಾಗಿ ಭೂಮಿಯಲ್ಲಿ ಇಂಗಿ ಹತ್ತಿರದ ಮನೆಯವರಾದ ತಮ್ಮ ಬಾವಿ ನೀರು ಕಲುಷಿತವಾಗುವ ಸಾಧ್ಯತೆ ಇರುವುದಾಗಿ ತಿಳಿಸಿರುತ್ತಾರೆ.

9. ಸದರಿ ಅಕ್ಕಿರೊಟ್ಟಿ ಉದ್ದಿಮೆದಾರರಾದ ಶ್ರೀ ಕೆ. ಮಾಧವ ಇವರು ಅಕ್ಕಿರೊಟ್ಟೆ ತಯಾರಿಕೆಗೆ ಉರವಲಾಗಿ ತೆಂಗಿನ ಸಿಪ್ಪೆ, ಗರಟೆ ಮತ್ತು ಭತ್ತದ ಒಟ್ಟುಗಳನ್ನು ಉಪಯೋಗಿಸುತ್ತಿದ್ದು, ಇದರಿಂದ ಪರಿಸರಕ್ಕೆ ಹಾನಿಯಾಗುವಂತಹ ಯಾವುದೇ ವಸ್ತು ಉಪಯೋಗಿಸುತ್ತಿಲ್ಲವೆಂದು, ಗೇರು ಬೀಜದ ಸಿಪ್ಪೆಯನ್ನು ಉಪಯೋಗಿಸುವುದನ್ನು ಈಗಾಗಲೇ ನಿಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಅಕ್ಕಿತೊಳೆದ ನೀರನ್ನು ಸಿಮೆಂಟ್‌ನ ಇಂಗು ಗುಂಡಿಯಲ್ಲಿ ಬಿಡಲಾಗುತ್ತದೆ ಎಂದು ಹಾಗೂ ಸದರಿ ಇಂಗು ಗುಂಡಿಯಿಂದ ಕಲುಷಿತ ನೀರನ್ನು ನೀರಿನ ತೋಡಿಗೆ ಬಿಡುತ್ತಿಲ್ಲವೆಂದು, ತಮ್ಮ ಆಸುಪಾಸಿನ ಜನರು ಘನ ತ್ಯಾಜ್ಯವನ್ನು ತೋಡಿಗೆ ಹಾಕುತ್ತಿರುವುದರಿಂದ ಅದು ಕಲುಷಿತವಾಗುತ್ತಿದೆ ಎಂದು ತಿಳಿಸಿರುತ್ತಾರೆ.

10. ಮುಂದುವರೆದು, ಶ್ರೀ ಮಾಧವ ಕೆ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ಜಾಗದ ಬಗ್ಗೆ ತಕರಾರು ಇದ್ದು, ಈ ಸಂಬಂಧ ದೂರುದಾರರಾದ ಶ್ರೀ ಗಣೇಶ್ ರವರ ಮೇಲೆ ಮಲ್ಪೆ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂ:128/2013ರ ಭಾರತ ದಂಡ ಸಂಹಿತೆ ಕಲಂ 447, 427, 506 ಸಹವಾಚ್ಯ 34 ರೀತ್ಯಾ ಪ್ರಕರಣ ದಾಖಲಾಗಿರುತ್ತದೆ ಎಂದು ಹಾಗೂ ಸಿವಿಲ್ ದಾವೆಯು ಸಹ ವಿಚಾರಣೆಗೆ ಬಾಕಿ ಇರುತ್ತದೆ ಎಂದು ಈ ವೈಮನಸ್ಸಿನಿಂದ ದೂರುದಾರರು ಈ ಪ್ರಕರಣದ ದೂರನ್ನು ನೀಡಿರುವುದಾಗಿ ಕಂಡು ಬರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

11. ತನಿಖಾ ವರದಿಯ ಪ್ರತಿಯನ್ನು ದೂರುದಾರರಿಗೆ ನೀಡಿ ಅವರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ದೂರುದಾರರು ತನಿಖಾಧಿಕಾರಿಯವರ ವರದಿಯು ದಿಕ್ಕುತಪ್ಪಿಸುವಂತಹ ತನಿಖಾ ವರದಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ.

12. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ತನಿಖಾ ವರದಿಯನ್ನು ಮತ್ತು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಶ್ರೀ ಮಾಧವ.ಕೆ ಇವರು ಕಿದಿಯೂರು ಗ್ರಾಮದ ಕಪ್ಪೆಟ್ಟು ಎಂಬುವ ಸ್ಥಳದಲ್ಲಿ ನಡೆಸುತ್ತಿರುವ ಅಕ್ಕಿರೊಟ್ಟಿಯ ಉದ್ದಿಮೆಯು ಕಾರ್ಖಾನೆ ಎಂದು ನೋಂದಾಯಿತವಾಗಿರುವುದು ಉದ್ಯೋಗ ಆಧಾರ ಪ್ರತಿಯಿಂದ ಕಂಡು ಬರುತ್ತದೆ (ಸದರಿ ಉದ್ಯೋಗ ಆಧಾರ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ಉದ್ದಿಮೆಯು ಮೈಕ್ರೋ ಎಂಟರ್‌ಪ್ರೈಸ್ ಎಂದು ತೋರಿಸಲಾಗಿದೆ. ಸದರಿ ಉದ್ದಿಮೆ ಇರುವ ಜಾಗವು ಕಿದಿಯೂರು ಗ್ರಾಮದ ಸರ್ವೆ ನಂಬರ್ 73/8ರ ಜಮೀನಿನ 0.20 ಎಕರೆ ವಿಸ್ತೀರ್ಣದ ಜಾಗದಲ್ಲಿ ಇರುವುದಾಗಿ ಕಂಡು ಬರುತ್ತದೆ. ಸದರಿ ಉದ್ದಿಮೆ ನಡೆಸುವ ಬಗ್ಗೆ ಭೂ ಪರಿವರ್ತನೆಯನ್ನು ಕೈಗೊಳ್ಳದೇ ಇರುವುದು ಸಹ ತನಿಖಾಧಿಕಾರಿಯವರ ವರದಿಯಿಂದ ಸ್ಪಷ್ಟ ಪಟ್ಟಿರುತ್ತದೆ. ಹಾಗೆಯೇ ತನಿಖಾಧಿಕಾರಿಯವರು ತಹಶೀಲ್ದಾರ್ ರವರಿಂದ ಈ ಬಗ್ಗೆ ಮಾಹಿತಿಯನ್ನು ಪಡೆದಿರುತ್ತಾರೆ. ಅಂಬಲಪಾಡಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಉಪನಿರ್ದೇಶಕರು ಗ್ರಾಮಾಂತರ ಕೈಗಾರಿಕೆ ಜಿಲ್ಲಾ ಪಂಚಾಯತ್ ಇವರಿಗೆ ದಿ:07/06/2016 ರಂದು ಪತ್ರ ಬರೆದು, ಅದರಲ್ಲಿ ಉದ್ದಿಮೆ ಮಾಲೀಕರು ರೊಟ್ಟಿ ತಯಾರಿಕೆಗೆ ಗೇರು ಬೀಜ ಸಿಪ್ಪೆಯನ್ನು ಬಳಸುತ್ತಿರುವುದಾಗಿ ಸ್ವತ: ಒಪ್ಪಿಕೊಂಡಿರುತ್ತಾರೆಂದು ಹಾಗೂ ರೊಟ್ಟಿ ತಯಾರಿಕ ಘಟಕದಿಂದ ಹೊರಟ ತ್ಯಾಜ್ಯ ದಿಂದ ಸಮೀಪದ ನಿವಾಸಿಗಳ ಕುಡಿಯುವ ನೀರಿನ ಬಾವಿಯ ನೀರು ಕಲುಷಿತಗೊಳ್ಳುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು ತಿಳಿಸಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

13. ಕಪ್ಪೆಟ್ಟು ಗ್ರಾಮಸ್ಥರು ಗ್ರಾಮ ಪಂಚಾಯತಿಗೆ ದೂರನ್ನು ಸಲ್ಲಿಸಿ ಶ್ರೀ ಮಾಧವ ಪೂಜಾರಿ ರವರು ನಡೆಸುತ್ತಿರವು ಅಕ್ಕಿರೊಟ್ಟಿ ಉದ್ದಿಮೆಯಿಂದ ಪರಿಸರ ಮಾಲಿನ್ಯವಾಗುತ್ತಿರುವ ಬಗ್ಗೆ ತಿಳಿಸಿ ಇದರ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಕೋರಿರುತ್ತಾರೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಉಡುಪಿ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳು ದಿ:17/04/2015ರ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ಹಾಗೂ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ, ಮಣಿಪಾಲ್ ಇವರುಗಳನ್ನು ಕುರಿತು ಉಡುಪಿ ತಾಲ್ಲೂಕಿನ ಕಿದಿಯೂರು ಗ್ರಾಮದಲ್ಲಿ ಶ್ರೀ ಮಾಧವ ಪೂಜಾರಿ ಇವರು ಅಕ್ಕಿರೊಟ್ಟಿ ಕಾರ್ಖಾನೆ ನಡೆಸುತ್ತಿದ್ದು, ಇದರಿಂದ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಯಾಗುತ್ತಿದ್ದು, ಸದರಿ ಕಾರ್ಖಾನೆಯನ್ನು ಮುಚ್ಚಿಸುವಂತೆ ಕಿದಿಯೂರು ಸಾರ್ವಜನಿಕರು ಮನವಿಯನ್ನು ಸಲ್ಲಿಸಿರುತ್ತಾರೆಂದು, ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುವುದು ಕಂಡು ಬರುತ್ತದೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

14. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಶ್ರೀ ಮಾಧವ ಪೂಜಾರಿ ಇವರು ನಡೆಸುತ್ತಿರುವ ಅಕ್ಕಿರೊಟ್ಟಿ ಉದ್ದಿಮೆಗೆ ಗೇರು ಬೀಜದ ಸಿಪ್ಪೆಯನ್ನು ಉರವಲಾಗಿ ಉಪಯೋಗಿಸುತ್ತಿರುವುದು ಕಂಡು ಬರುತ್ತದೆ. ಇದರಿಂದ ಪರಿಸರದಲ್ಲಿ ವಾಯು ಮಾಲಿನ್ಯವಾಗುತ್ತಿರುವುದು ಹಾಗೂ ಸದರಿ ಉದ್ದಿಮೆದಾರರು ಅಕ್ಕಿಯನ್ನು ತೊಳೆದ ನೀರನ್ನು ಸಿಮೆಂಟ್ ಗುಂಡಿಗೆ ಬಿಟ್ಟು ಅಲ್ಲಿಂದ ಪೈಪಿನ ಮೂಲಕ ನೀರು ಹರಿಯುವ ತೋಡಿಗೆ ಬಿಡುತ್ತಿರುವುದು ತನಿಖಾಧಿಕಾರಿಯವರ ವರದಿಯಿಂದ ತಿಳಿದು ಬರುತ್ತದೆ. ಇದರಿಂದ ಸುತ್ತಮುತ್ತಲ ವಾಸಿಸುವ ಸಾರ್ವಜನಿಕರ ಮನೆಗಳ ಬಾವಿಗಳಲ್ಲಿ ನೀರು ಕಲುಷಿತಗೊಳ್ಳುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಮೇಲೆ ಹೇಳಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರ ಪತ್ರದಿಂದ ಸ್ಪಷ್ಟಪಡುತ್ತದೆ ಹಾಗೂ ತನಿಖಾಧಿಕಾರಿಯವರ ವರಿದಿಯಲ್ಲೂ ಈ ಬಗ್ಗೆ ಉಲ್ಲೇಖವಿರುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಯವರು ಸದರಿ ಉದ್ದಿಮೆಯು ತಮ್ಮ ಇಲಾಖೆಯ "consenting mechanism" ಗೆ ಒಳಪಡುತ್ತಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ಸದರಿ ಉದ್ದಿಮೆದಾರರು ಗೇರು ಬೀಜದ ಸಿಪ್ಪೆಯನ್ನು ಉರವಲಾಗಿ ಬಳಸುತ್ತಿರುವುದರಿಂದ ಸುತ್ತಮುತ್ತಲಿನ ಪರಿಸರ ಹದಗೆಡುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ತನಿಖಾಧಿಕಾರಿಯವರು ದೂರುದಾರರು ಹಾಗೂ ಶ್ರೀ ಮಾಧವ ಪೂಜಾರಿ ಇವರ ನಡುವೆ ಆಸ್ತಿಗೆ ಸಂಬಂಧಿಸಿದಂತೆ ಸಿವಿಲ್ ದಾವೆ ಇರುವ ಬಗ್ಗೆ ಉಲ್ಲೇಖಿಸಿರುತ್ತಾರೆ. ಆದರೆ, ಸದರಿ ಪ್ರಕರಣವು ಶ್ರೀ ಮಾಧವ ಪೂಜಾರಿ ಇವರ ಅಕ್ಕಿರೊಟ್ಟಿ ಉದ್ದಿಮೆಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯಕ್ಕೆ ಸಂಬಂಧಪಡದ ವಿಷಯವಾಗಿರುತ್ತದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರು

ತಿಳಿಸಿರುವಂತೆ ಶ್ರೀ ಮಾಧವ ಪೂಜಾರಿ ಇವರ ಕಿದಿಯೂರು ಗ್ರಾಮದ ಕಪ್ಪೆಟ್ಟುವಿನಲ್ಲಿ ಇರುವ ಅಕ್ಕಿರೊಟ್ಟಿ ಉದ್ದಿಮೆಯಿಂದ ಪರಿಸರ ಮಾಲಿನ್ಯವಾಗುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

15. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಶ್ರೀ ಮಾಧವ ಪೂಜಾರಿ ಇವರ ಕಿದಿಯೂರು ಗ್ರಾಮದ ಕಪ್ಪೆಟ್ಟುವಿನಲ್ಲಿ ಇರುವ ಅಕ್ಕಿರೊಟ್ಟಿ ಉದ್ದಿಮೆಯಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದ್ದು, ಸದರಿ ಪರಿಸರ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾನೂನಿನಡಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 20/4/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**